ಸುವಂತೆ ಕೇಳುವ ಅಧಿಕಾರ, ಪ್ರಾಧಿಕಾರಕ್ಕೆ ಇದೆ ಸಹಕಾರ ಸಂಘಗಳ ಸಾಲದ ಬಡ್ಡಿಯನ್ನು ಮನ್ನಾ ಮಾಡುವಂತೆ ಸಲಹೆಯನ್ನು ತಾವು ಕೊಟ್ಟಿದ್ದೀರಿ ಆ ಸಲಹೆಯನ್ನು ಪಂಡಿತವಾಗಿ ಕಾರ್ಯಗತ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಬೇರೆಯವರಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ವಿವರವನ್ನು ಕೊಟ್ಟಿದ್ದೀರಿ. ಆದರೆ ರೈತರಿಗೆ ನೇರವಾಗಿ ಈ ಹಣದಲ್ಲಿ ಖರ್ಚು ಮಾಡಿರತಕ್ಕಂತಹ ಮೊತ್ತ ಎಷ್ಟು ?

ಶ್ರೀ ಎಂ. ಎಸ್. ಆತ್ಮಾನಂದ.—ಇದಕ್ಕೆ ಬೇರೆ ನೋಟೀಸ್ ಕೊಡಬೇಕಾಗುತ್ತದೆ.

ರಾಜ್ಯದಲ್ಲಿರುವ ಉಕ್ಕಡಗಳಿಂದ ಮಾರಾಟ ಹಾಗೂ ವಾಣಿಜ್ಯ ತೆರಿಗೆಗಳ ಸಂಗ್ರಹ

೭೫. ಶ್ರೀ ಡಿ. ಎ. ಚಿನ್ನಪ್ಪ(ಮಾಡಿಕೇರಿ).—ಮಾನ್ಯ ಆರ್ಥಿಕ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾರಾಟ ತೆರಿಗೆ ವಸೂಲಿ ಮಾಡಲು ರಾಜ್ಯದಲ್ಲಿರುವ ಒಟ್ಟು ಶೋಧನಾ ಠಾಣೆಗಳ ಸಂಖ್ಯೆ.

ಆ) ಹಿಂದಿನ ಮೂರು ವರ್ಷಗಳಲ್ಲಿ ಈ ಶೋಧನಾ ಠಾಣೆಗಳಿಂದ ವಸೂಲಾದ ಮೊತ್ತ.

ಇ) ಈ ಶೋಧನಾ ಠಾಣೆಗಳಲ್ಲಿನ ಸಿಬ್ಬಂದಿ ಸಂಖ್ಯೆ (ಹಿಂದಿನ ಮೂರು ವರ್ಷಗಳಲ್ಲಿ ವರ್ಗವಾರು ವಿವರಣೆ ನೀಡಬಹುದು)

ಈ) ಹಿಂದಿನ ಮೂರು ವರ್ಷಗಳ ಸಿಬ್ಬಂದಿ ಖರ್ಚುಗಳು ಶೋಧನಾ ಠಾಣೆಗಳಲ್ಲಿ ವಸೂಲಾದ ಮೊತ್ತಕ್ಕಿಂತ ಕಡಿಮೆಯಾಗಿದ್ದಲ್ಲಿ ಸಿಬ್ಬಂದಿಯನ್ನು ಮುಂದುವರೆಸದಿರುವ ಆಲೋಚನೆ ಇದೆಯೇ ?

ಉ) ಸರ್ಕಾರವು ಕಡಿಮೆ ವಸೂಲಾತಿಯಾಗುತ್ತಿರುವುದರ ಬಗ್ಗೆ ಕಾರಣಗಳನ್ನು ಕಂಡು ಹಿಡಿಯಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ(ವಿತ್ತ ಮಂತ್ರಿಗಳು).—

ಅ) ೪೮

ಆ)

ವರ್ಷ	(ರೂ. ಲಕ್ಷಗಳಲ್ಲಿ)
೮೭–೮೮	೨೫೯–೮೯
೮೮–೮೯	೩೬೧–೮೧
೮೯–೯೦	೫೦೦– ೫

ಇ)

ವರ್ಷ	ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ	ವಾಣಿಜ್ಯ ತೆರಿಗೆ ಪರಿವೀಕ್ಷಕರು	ದ್ವಿತೀಯ ದರ್ಜೆ ಸಹಾಯಕರು	ಜವಾನರು	ಚಾಲಕರು
೮೭–೮೮	೧೮೦	೧೧೬	೧೩೬	೧೩೨	೨೨
೮೮–೮೯	೧೮೦	೧೧೬	೧೩೬	೧೩೨	೨೨
೮೯–೯೦	೧೮೮	೧೨೪	೧೩೬	೧೩೬	೨೬

ಈ) ಇಲ್ಲ.

ಉ) ಶೋಧನಾ ಠಾಣೆಗಳಲ್ಲಿ ದಂಡ ಸಂಗ್ರಹಣೆಯ ಮೊತ್ತವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲಿದೆ.

೧೦–೧೫ ಎ.ಎಂ.

ಶ್ರೀ ಡಿ. ಎ. ಚಿನ್ನಪ್ಪ.—ಸ್ವಾಮಿ, ಈ ಇಲಾಖೆಯಲ್ಲಿರುವ ಇಷ್ಟು ಅಧಿಕಾರಿಗಳಿಗೆ ಎಷ್ಟು ಹಣ ಸಂಬಳಕ್ಕಾಗಿ ಖರ್ಚಾಗುತ್ತದೆಂದು ನಾನು ವಿವರವನ್ನು ಕೇಳಿದ್ದೆ. ಆದರೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ. ಚೆಕ್‌ಪೋಸ್ಟ್‌ಗಳನ್ನು ೨–೩ ವರ್ಷಕ್ಕೊಮ್ಮೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬದಲಾಯಿಸಲು ಕಾರಣವೇನು ? ಈ ಚೆಕ್‌ಪೋಸ್ಟ್‌ಗಳಿಂದ ಎಷ್ಟು ಹಣ ವಸೂಲಾಗುತ್ತದೆ ? ಮತ್ತು ಎಷ್ಟು ಖರ್ಚಾಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಚೆಕ್‌ಪೋಸ್ಟ್‌ಗಳಿಂದ ಬರತಕ್ಕ ಹಣ ೫ ಕೋಟಿ ರೂಪಾಯಿ ಮತ್ತು ಖರ್ಚಾಗತಕ್ಕ ಹಣ ೨.೫ ಕೋಟಿ ರೂಪಾಯಿಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕಳ್ಳಭಟ್ಟಿ ಪ್ರಕರಣಗಳು

೨೭೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಆರ್ಥಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೮೮–೮೯, ೧೯೮೯–೯೦ರಲ್ಲಿ ಪತ್ತೆ ಹಚ್ಚಿದ ಕಳ್ಳಭಟ್ಟಿ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಪ್ರತಿ ವರ್ಷ ಎಷ್ಟು ಕಳ್ಳಭಟ್ಟಿಗಳನ್ನು ನಾಶ ಮಾಡಲಾಗಿದೆ ?

ಇ) ಪತ್ತೆ ಹಚ್ಚಿದ ಎಷ್ಟು ಪ್ರಕರಣಗಳ ಬಗ್ಗೆ ದಾವೆ ಹೂಡಲಾಗಿದೆ ಮತ್ತು ಎಷ್ಟು ಜನರಿಗೆ ಶಿಕ್ಷೆ ಆಗಿದೆ ?

ಈ) ಕಳ್ಳಭಟ್ಟಿ ನಿರ್ಮೂಲನಕ್ಕೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ವಿತ್ತ ಮಂತ್ರಿಗಳು).—

ಅ) ೧೯೮೮–೮೯ — ೩೦೦
೧೯೮೯–೯೦ — ೧೬೫

ಆ) ೧೯೮೮–೮೯ — ೭೭೫೯ ಲೀಟರ್‌ಗಳು
೧೯೮೯–೯೦ — ೮೨೯೬ ಲೀಟರ್‌ಗಳು
೧೯೯೦ ಏಪ್ರಿಲ್ ಅಂತ್ಯದವರೆಗೆ

ಇ) ದಾವೆಗಳ ಸಂಖ್ಯೆ
೧೯೮೮–೮೯ — ೧೩೮ ದಾವೆ
೧೯೮೯–೯೦ — ೧೬೧ ದಾವೆ

ಶಿಕ್ಷೆಗೆ ಗುರಿಪಡಿಸಿರುವವರ ಸಂಖ್ಯೆ
೧೯೮೮–೮೯ — ಇಲ್ಲ
೧೯೮೯–೯೦ — ಇಲ್ಲ

ಈ) ಕಳ್ಳಭಟ್ಟಿ ಕೇಂದ್ರಗಳ ಮೇಲೆ ದಾಳಿಗಳನ್ನು ಮಾಡಲು ಆದೇಶ ನೀಡಲಾಗಿದೆ. ಆದರಂತೆ ದಾಳಿಗಳನ್ನು ಮೇಲಿಂದ ಮೇಲೆ ಏರ್ಪಡಿಸಲಾಗುತ್ತಿದೆ. ಅಬಕಾರಿ ಅಪರಾಧಗಳಲ್ಲಿ ಸಿಗತಕ್ಕಂತಹ ವಾಹನಗಳನ್ನು ಮತ್ತು ಇನ್ನಿತರ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೋಸರ ಅಬ್ಕಾರಿ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವುದಕ್ಕೋಸ್ಕರ ಕರ್ನಾಟಕ ಅಬಕಾರಿ ಕಾಯಿದೆಗೆ ತಿದ್ದುಪಡಿಯನ್ನು ತರಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ ನಾನು ಕೇಳಿದ ಪ್ರಶ್ನೆ ಎಂದರೆ ''ಪತ್ತೆ ಹಚ್ಚಿದ ಎಷ್ಟು ಪ್ರಕರಣಗಳ ಬಗ್ಗೆ ದಾವೆ ಹೂಡಲಾಗಿದೆ ಮತ್ತು ಎಷ್ಟು ಜನರಿಗೆ ಶಿಕ್ಷೆ ಆಗಿದೆ'' ಎಂದು. ಅದಕ್ಕೆ ತಮ್ಮ ಉತ್ತರ ೧೯೮೮–೮೯ರ ಸಾಲಿನಲ್ಲಿ ೧೩೮ ದಾವೆ ಮತ್ತು ೧೯೮೯–೯೦ರ ಸಾಲಿನಲ್ಲಿ ೧೬೧ ದಾವೆಗಳನ್ನು ಹೂಡಲಾಗಿದೆ ಎಂದು ಅಷ್ಟನ್ನೇ ಹೇಳಿದ್ದೀರಿ. ಆದರೆ ೮೮–೮೯ ಮತ್ತು ೮೯–೯೦ರ ಸಾಲಿನಲ್ಲಿ ಯಾರಿಗೂ ಶಿಕ್ಷೆಯೇ ಆಗಿಲ್ಲವೆಂದು ಹೇಳಿದ್ದೀರಿ. ಕೇವಲ ಶಿಕ್ಷೆ ಕೊಟ್ಟರೆ ಕಳ್ಳಭಟ್ಟಿ ಪ್ರಕರಣಗಳೆಲ್ಲಾ ನಿಂತು ಹೋಗುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಶಿಕ್ಷೆ ಮಾಡುವುದರಿಂದ ಕಳ್ಳಭಟ್ಟಿ ತಯಾರಿಸುವವರಿಗೆ ಸ್ವಲ್ಪ ಮಟ್ಟಿನ ಭಯ ಇರುತ್ತದೆಂಬ ಕಾರಣಕ್ಕಾಗಿ ನಾನು ಕೇಳಿರತಕ್ಕದ್ದು. ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಸಾದಿ ಅರೇಬಿಯಾದಲ್ಲಿ ಕದ್ದವರ ಕೈಯನ್ನು ಕಡಿಯುತ್ತಾರೆ, ವ್ಯಭಿಚಾರ ಮಾಡಿದವರನ್ನು ಬೀದಿಯಲ್ಲಿ ನಿಲ್ಲಿಸಿ ಕಲ್ಲಿನಿಂದ ಹೊಡೆಯುತ್ತಾರೆ. ಆದೇ ರೀತಿ ಸಮ್ಮಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವವರಿಗೆ ಕೈಯನ್ನು ಕಡಿಯುವ ಬಗ್ಗೆ ಯೋಚನೆಯನ್ನು ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಶಿಕ್ಷೆ ಕೊಡುವುದಕ್ಕೆ ಇಂಡಿಯನ್ ಪೀನಲ್ ಕೋಡ್ ಇದೆ.